## ನೆದರ್ಲೆಂಡ್ಸ್‌ನಲ್ಲಿ ಬೈಗುಳ ಬೊಗಳುವಿಕೆಗೂ ಕಾನೂನು ಚೌಕಟ್ಟು

# ಸ್ವಾತಂತ್ರ್ಯಕ್ಕೆ ಒತ್ತು, ಸ್ವಚ್ಛಂದಕ್ಕೆ ಚಿತ್ತು



ಮಾದಕ ಪದಾರ್ಥಗಳು ಹಾಗೂ ವೇಶ್ಯಾವಾಟಿಕೆಯ ಉದಾರ ನೀತಿಗೆ ನೆದರ್ಲೆಂಡ್ ವಿಶ್ವಪ್ರಸಿದ್ಧ. ಸ್ವಾತಂತ್ರ್ಯದ ಸಮಾನಾರ್ಥಕವಾಗಿ ನೆದರ್ಲೆಂಡ್ಸ್ ದೇಶವನ್ನು ಗುರ್ತಿಸಲಾಗುತ್ತದೆ. ಆದರೆ, ಈ ದೇಶದ ಕಾನೂನುಗಳು ಸ್ವಾತಂತ್ರ್ಯವನ್ನು ಸ್ವಚ್ಛಂದವಾಗಿ ಭಾವಿಸಲು ಅವಕಾಶ ಕಲ್ಪಿಸುವುದಿಲ್ಲ.

■ ಜಿ. ನಾಗೇಂದ್ರ

ಪ್ರತಿಯೊಂದು ದೇಶದ ಆಚಾರ ವಿಚಾರಗಳು ಭಿನ್ನವಾಗಿರುವಂತೆ ಕಾನೂನುಗಳೂ ಬೇರೆ ಬೇರೆಯಾಗಿರುತ್ತವೆ. ಕೆಲವು ದೇಶಗಳಲ್ಲಿ ಜಾರಿಯಲ್ಲಿರುವ ಕಾನೂನುಗಳು ಇತರರಿಗೆ ತಮಾಷೆಯಾಗಿ ಕಂಡರೂ ಆ ದೇಶದ ಜನರು ಅವುಗಳನ್ನು ಗೌರವಿಸಿ ಪಾಲಿಸಲೇಬೇಕು. ಕೆಲವೊಮ್ಮೆ ಇಂತಹ ಕಾನೂನುಗಳ ಮೂಲಕ ವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಲಾಗಿದೆಯೇ ಎಂಬ ಅನುಮಾನವೂ ಮೂಡುತ್ತದೆ. ಇಂಥ ಅನುಮಾನ ಹಾಗೂ ಗೊಂದಲ ನೆದರ್ಲೆಂಡ್ಸ್ ದೇಶದ ಕೆಲವು ಕಾನೂನುಗಳನ್ನು ಗಮನಿಸಿದಾಗ ಉಂಟಾಗುತ್ತದೆ. ಅಂತಹ ಕೆಲವು ಕಾನೂನುಗಳ ಬಗ್ಗೆ ತಿಳಿಯೋಣ.

### ಕಳ್ಳರ ಘನತೆಗೆ ರಕ್ಷಣೆ

ಮನೆಗೆ ಕಳ್ಳ ನುಗ್ಗಿ ವಸ್ತುಗಳನ್ನು ಕದಿಯುತ್ತಿರುವಾಗ ಸಿಕ್ಕಿಬಿದ್ದಲ್ಲಿ, ಆತನನ್ನು ಶೌಚಾಲಯದಲ್ಲಿ ಬಂಧಿಸಿಡುವಂತಿಲ್ಲ.

### ಸುಡುಮದ್ದಿಗೆ ನಿಯಂತ್ರಣ

ಸುಡುಮದ್ದುಗಳನ್ನು ಹಚ್ಚುವುದರ ಮೇಲೂ ನಿರ್ಬಂಧ ವಿಧಿಸಲಾಗಿದೆ. ಪ್ರತಿ ಡಿಸೆಂಬರ್ 29ರಿಂದ 31ರವರೆಗಷ್ಟೇ ಸುಡುಮದ್ದು ಮಾರಾಟಕ್ಕೆ ಅನುಮತಿ. ವರ್ಷದ ಇತರೆ ದಿನಗಳಲ್ಲಿ ಯಾವುದೋ ಕಾರಣಕ್ಕೂ ಪಟಾಕಿಗಳನ್ನು ಹಚ್ಚುವಂತಿಲ್ಲ. ಹಾಗಾಗಿ ಜನರು ಡಿಸೆಂಬರ್ ಕೊನೆಯ ಮೂರೂ ದಿನಗಳು ತಮಗಿಷ್ಟ ಬಂದಂತೆ ಪಟಾಕಿಗಳನ್ನು ಹಚ್ಚಿ ಆನಂದಿಸುತ್ತಾರೆ. ಪರಿಸರ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ಕಾನೂನು ಒಳ್ಳೆಯದೆಂದು ಹೇಳಬಹುದು.

### ಹೆಲ್ಮೆಟ್ ಕಡ್ಡಾಯವಲ್ಲ

ಚಾಲಕರು ಹೆಲ್ಮೆಟ್ ಧರಿಸದಿದ್ದರೂ ಪರವಾಗಿಲ್ಲ. ಬೈಕ್‌ಗೆ (ನೆದರ್ಲೆಂಡ್ಸ್‌ನಲ್ಲಿ ಸೈಕಲ್ ಅನ್ನು ಬೈಕ್ ಎಂದು ಕರೆಯುತ್ತಾರೆ) ಲೈಟ್ ಮತ್ತು ಬೆಲ್ ಇರಲೇಬೇಕು. ಬೈಕ್ ಸವಾರ ಸುರಕ್ಷತಾ ದೃಷ್ಟಿಯಿಂದ ತಲೆಗೆ ಹೆಲ್ಮೆಟ್ ಧರಿಸಬೇಕೆಂಬ ನಿಯಮ ಹಲವು ದೇಶಗಳಲ್ಲಿದೆ. ವಿಚಿತ್ರವೆಂಬಂತೆ ನೆದರ್ಲೆಂಡ್‌ನಲ್ಲಿ ಬೈಕ್ ಸವಾರ ಹೆಲ್ಮೆಟ್ ಧರಿಸದಿದ್ದರೂ ಅಪರಾಧವಲ್ಲ. ಬಹುಶಃ ಅಲ್ಲಿ ಬೈಕ್‌ಗಳಿಗಾಗಿ ಪ್ರತ್ಯೇಕ ಪಥ ಇರುವುದರಿಂದ ಯಾವುದೇ ಅಪಘಾತ ಸಂಭವಿಸಲಾರದೆಂದು ಭಾವಿಸಿ, ಹೆಲ್ಮೆಟ್ ಧರಿಸುವುದರಿಂದ ವಿನಾಯಿತಿ ನೀಡಿರಬಹುದು.

### ಪಾದಚಾರಿಗಳೇ ಹುಷಾರ್

ನೆದರ್ಲೆಂಡ್ಸ್‌ನಲ್ಲಿ ಬೈಕ್, ಕಾರು ಹಾಗೂ ಪಾದಚಾರಿಗಳಿಗೆಂದೇ ಪ್ರತ್ಯೇಕ ಪಥಗಳಿವೆ. ಒಂದುವೇಳೆ, ಬೈಕ್ ಪಥದಲ್ಲಿ ಪಾದಚಾರಿ ಹೋಗುವಾಗ ಬೈಕ್ ಡಿಕ್ಕಿ ಹೊಡೆದಲ್ಲಿ, ಸವಾರನ ಮೇಲೆ ಕಾನೂನುಕ್ರಮ ತೆಗೆದುಕೊಳ್ಳಲಾಗುವುದಿಲ್ಲ. ಅದೇರೀತಿ ಕಾರು ಬೈಕಿಗೆ ಡಿಕ್ಕಿ ಹೊಡೆದರೆ ತಪ್ಪು ಬೈಕ್ ಸವಾರನದ್ದಾಗಿರುತ್ತದೆ. ಯಾಕೆಂದರೆ, ಕಾರಿನ ಪಥದಲ್ಲಿ ಬೈಕ್ ಹೋಗುವಂತಿಲ್ಲ.

### ವಿಲಕ್ಷಣ ಅಲಾರಾಂ

ಪ್ರತಿ ತಿಂಗಳ ಮೊದಲ ಸೋಮವಾರ ಮಧ್ಯಾಹ್ನ 12ಕ್ಕೆ ಸರಿಯಾಗಿ, 90 ಸೆಕೆಂಡುಗಳ ಕಾಲ ಕಿವಿಗಡಚಿಕ್ಕುವಂತೆ ವಿಲಕ್ಷಣ ಅಲಾರಾಂ ಸದ್ದು ಮೊಳಗುತ್ತದೆ. ನಿಗದಿತ ದಿನ ಹಾಗೂ ಸಮಯದಂದು ಅಲಾರಾಂ ಸಾಧನಗಳನ್ನು ನಿಯಮಿತವಾಗಿ ಪರೀಕ್ಷೆಗೆ ಒಳಪಡಿಸಬೇಕೆಂಬ ಕಾನೂನಿನ ಪ್ರಕಾರ ಇದು ಅನಿವಾರ್ಯ. ಪ್ರಜೆಗಳು ವಿಧಿಯಿಲ್ಲದೆ ವಿಲಕ್ಷಣವಾದ ಅಲಾರಂ ಶಬ್ದವನ್ನು ಸಹಿಸಿಕೊಳ್ಳಲೇಬೇಕು.



ಸೈಕಲ್‌ಗಳ ಸವಾರಿಗೆ ಪ್ರತ್ಯೇಕಪಥ